**ಎಲ್ ಎ ಸಿ ನಂ: 42/2015**
**ಆರ್ ಡಬ್ಲ್ಯೂ : 1**

**ದಿ: 04.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಎಸ್ ವಿ ವಕೀಲರಿಂದ:-**

ತಿಮ್ಮಸಂದ್ರ ಗ್ರಾಮದ ಸರ್ವೆ ನಂ. 68/2 ರ ಒಟ್ಟು ವಿಸ್ತೀರ್ಣ 6 ಎಕರೆ 25 ಗುಂಟೆ ಇರಬಹುದು. ನಿಪಿ 1 ಪಹಣಿ ಪತ್ರಿಕೆಯಲ್ಲಿ ಮಾರಯ್ಯ ಬಿನ್ ಪುಟ್ಟಯ್ಯ ಎಂಬುವವರಿಗೆ ಎಂ ಆರ್ 4/88-89 ರಂತೆ 3 ಎಕರೆ ಜಮೀನು ಮ್ಯುಟೇಷನ್ ಆಗಿದೆ ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ಮಾರಯ್ಯ ನನ್ನ ಚಿಕ್ಕಪ್ಪ. ಎಂ ಆರ್ 37/93-94 ರ ವಿಸೀರ್ಣ 3 ಎಕರೆ 12 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರು ಮಾಡಿದ್ದೀರ ಎಂದರೆ ಸಾಕ್ಷಿ ಕೆಳಗಿನ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು ನಾನು ಈ ನ್ಯಾಯಾಲಯಕ್ಕೆ ಕೂಡ ಹಾಜರುಪಡಿಸುತ್ತೇನೆ. ಸದರಿ ಎಂ ಆರ್ ಗಳು ತಮ್ಮ ಬಳಿ ಇಲ್ಲ ಸದರಿ ದಾಖಲಾತಿಗಳನ್ನು ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿಕೊಂಡಿದ್ದೀರ ಎಂದರೆ ಸರಿಯಲ್ಲ. ಮಾರಯ್ಯ ಬಿನ್ ಪುಟ್ಟಯ್ಯರ ಹೆಸರನ್ನು ತೆಗೆದುಹಾಕಿ 3 ಎಕರೆ ವಿಸ್ತೀರ್ಣಕ್ಕೆ ಬದಲಾಗಿ 2 ಎಕರೆ 35 ಗುಂಟೆ ನಮೂದಾಗಿದೆ ಎಂದರೆ ಸರಿಯಲ್ಲ. 37/83-84 ರ ಮ್ಯುಟೇಷನ್ ಬಗ್ಗೆ ತಮ್ಮ ಪಹಣಿ ದಾಖಲಾತಿಗಳಲ್ಲಿ ನಮೂದಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 68/2 ರ ನಮಗೆ ಸೇರಿದ ಪಹಣಿಯಲ್ಲಿ 3 ಎಕರೆ 12 ಗುಂಟೆ ಇದೆ. ಸರ್ವೆ ನಂ. 68/2 ರ ಹಾಲೀ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ಹಾಲೀ ಸರ್ವೆ ನಂ. 68/2 ರ ಪಹಣಿ ಪತ್ರಿಕೆಯಲ್ಲಿ 3 ಎಕರೆ 33 ಗುಂಟೆ ವಿಸ್ತೀರ್ಣ ಇದೆ. ಸರ್ವೆ ನಂ. 68/2 ಪೋಡಿ ಆಗಿ ಸರ್ವೆ ನಂ. 68/3 ಆಗಿದೆ ಎಂದರೆ ಸರಿ. ಸರ್ವೆ ನಂ. 68/3 ರಲ್ಲಿ 2 ಎಕರೆ 26 ಗುಂಟೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಮಾರಯ್ಯ ಬಿನ್ ಪುಟ್ಟಯ್ಯ ನನ್ನ ದೊಡ್ಡಪ್ಪ. ಸದರಿ ರವರು ಸರ್ವೆ ನಂ. 68/3 ರ 2 ಎಕರೆ 26 ಗುಂಟೆ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ಸರ್ವೆ ನಂ. 68/2 ಮತ್ತು ಸರ್ವೆ ನಂ. 68/3 ರ ಒಟ್ಟು ವಿಸ್ತೀರ್ಣ 6 ಎಕರೆ 19 ಗುಂಟೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 68/2 ಮತ್ತು 68/3 ರ ಹಿಡುವಳಿ ದಾರರು ಪಹಣಿಯಲ್ಲಿರು ತಮ್ಮ ವಿಸ್ತೀರ್ಣ ಕ್ಕೆ ಅನುಸಾರವಾಗಿ ಸ್ವಾಧೀನಾನುಭವದಲ್ಲಿದ್ದಾರೆ

ಎಲ್ ಎ ಸಿ ನಂಃ 42/2015

ಆರ್ ಡಬ್ಲ್ಯೂ ಃ 1

ಎಂದರೆ ಸರಿ. ಸರ್ವೆ ನಂ. 68/2 ಪೋಡಿ ಆಗಿ ಪೂರ್ವದ ಕಡೆಗೆ ಸರ್ವೆ ನಂ. 68/3 ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ದೊಡ್ಡಪ್ಪನವರ ಭಾಗ ಸರ್ವೆ ನಂ. 68/2 ಪೂರ್ವದ ಕಡೆಗೆ ಬರುತ್ತದೆ. ನನ್ನ ದೊಡ್ಡಪ್ಪನವರಿಗೆ ಸೇರಿದ ಜಮೀನು ಸರ್ವೆ ನಂ. 68/3 ಎಂದರೆ ಸಾಕ್ಷಿ ಇರಬಹುದು ಎಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೆ ನಂ. 68/3 ಪಶ್ಚಿಮದ ಕಡೆ 3 ಎಕರೆ 12 ಗುಂಟೆ ತಮಗೆ ಸೇರಿದ್ದು ಎಂದರೆ ಸರಿ. ಸದರಿ 3 ಎಕರೆ 12 ಗುಂಟೆ ಪಶ್ಚಿಮದ ಕಡೆ 21 ಗುಂಟೆ 2 ನೇ ಎದುರುದಾರರ ಜಮೀನು ಎಂದರೆ ಸರಿಯಲ್ಲ. ದಿಃ 01.08.1965 ರಲ್ಲಿ ಪುಟ್ಟಯ್ಯನವರ ಇಬ್ಬರ ಹೆಂಡತಿಯರ ನಡುವೆ ವಿಭಾಗ ಆದ ಬಗ್ಗೆ ತಾವು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಿಃ 21.02.1984 ರಲ್ಲಿ ದೊಡ್ಡ ಚನ್ನಮ್ಮನ ಮಕ್ಕಳ ನಡುವೆ ವಿಭಾಗ ಆಗಿದೆ ಎಂದು ಹೇಳಿರುತ್ತೀರಿ ಸದರಿ ವಿಚಾರದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿದ್ದೀರ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ. ತಾವು ಯಾವುದೇ ದಾಖಲಾತಿಯನ್ನು ಹಾಜರುಪಡಿಸದಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಾವು ರಾಮನಗರ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್ ಎ 677/2019-20 ರಂತೆ ಸರ್ವೆ ನಂ. 68/2 ರ ವಿಸ್ತೀರ್ಣ 21 ಗುಂಟೆಗೆ ಮೇಲ್ಮನವಿಯನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಸರ್ವೆ ನಂ. 68/2 ರ ಹಾಲಿ ಪಹಣಿಯಲ್ಲಿ ತಮ್ಮ ವಿಸ್ತೀರ್ಣ 3 ಎಕರೆ 12 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿ. ತಾವು ಸರ್ವೆ ನಂ. 68/2 3 ಎಕರೆ 12 ಗುಂಟೆ ಜಮೀನಿಗೆ ಮಾತ್ರ ಸ್ವಾಧೀನಾನುಭವದಲ್ಲಿದ್ದೀರಿ ಎಂದರೆ ಸರಿ. ಸರ್ವೆ ನಂ. 68/2 ರ ಉಳಿಕೆ 21 ಗುಂಟೆ ಜಮೀನು 2 ನೇ ಎದುರುದಾರರಿಗೆ ಸೇರಿದ್ದು ಎಂದರೆ ಸರಿಯಲ್ಲ. ರಸ್ತೆ ಅಗಲೀಕರಣಕ್ಕೆ ಸರ್ವೆ ನಂ. 68/2 ರ ಜಮೀನಿನಲ್ಲಿ 21 ಗುಂಟೆ ಪೈಕಿ 4 1/4 ಗುಂಟೆ ಭೂ ಸ್ವಾಧೀನ ಆಗಿದೆ ಎಂದರೆ ಸರಿ. ಭೂಸ್ವಾಧೀನ ಅಧಿಕಾರಿಗಳಿಂದ ನೋಟಿಸ್ ಜಾರಿ ಆಗದೆ ಕಾಲದಲ್ಲಿ ಸರ್ವೆ ನಂ. 68/2 ರ ಖಾತೆಯು ಪುಟ್ಟಮಾರಯ್ಯನವರ ಅಂದರೆ ತಮ್ಮ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿ. ಸರ್ವೆ ನಂ. 68/2 ಲ್ಲಿ 2 ನೇ ಎದುರುದಾರು ಸ್ವಾಧೀನಾನುಭವದಲ್ಲಿದ್ದು ಆ ಕಾರಣ ಸದರಿರವರು

**ಎಲ್ ಎ ಸಿ ನಂಃ 42/2015**

**ಆರ್ ಡಬ್ಲ್ಯೂ ಃ 1**

ಭೂಸ್ವಾಧೀನ ಅಧಿಕಾರಿಗಳು ಜಾರಿ ಮಾಡಿರುವ ನೋಟಿಸ್ ಗೆ ತಕರಾರಿನಲ್ಲಿ ಸಲ್ಲಿಸಿದಾದ್ದರೆ ಎಂದರೆ ಸರಿ. ಸರ್ವೆ ನಂ. 68/2 ರ 21 ಗುಂಟೆ ಜಮೀನು ನನಗೆ ಸೇರಿದ್ದು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸುತ್ತೇನೆ. ರಾಮನಗರದ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ತಾವು ಸಲ್ಲಿಸಿರುವ ರೆವಿನ್ಯೂ ವಜಾ ಆಗಿದ್ದು ಸದರಿ, ಆದೇಶದ ವಿರುದ್ಧ ತಾವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಪುಟ್ಟಯ್ಯ ರವರ ಇಬ್ಬರು ಹೆಂಡತಿಯರು ಹಾಗೂ ಅವರ ಮಕ್ಕಳ ನಡುವೆ ಆಸ್ತಿ ವಿವಾದಗಳು ಇವೆಯಾ ಎಂದರೆ ಸಾಕ್ಷಿ ಈ ಹಿಂದೆ ಇರಲಿಲ್ಲ ಈಗ ಇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ತಮ್ಮ ಕುಟುಂಬದಲ್ಲಿ ನೋಂದಾಯಿತ ವಿಭಾಗ ಪತ್ರವಾಗಲಿ ಅಥವಾ ನ್ಯಾಯಾಲಯದ ಡಿಕ್ರಿ ಆಗಲಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ.

ಚಿಕ್ಕಚನ್ನಮ್ಮನ ಮಕ್ಕಳು ಆಸ್ತಿ ವಿಚಾರವಾಗಿ ಗಲಾಟೆ ಮಾಡಿಕೊಂಡಿದ್ದಾರ ಎಂದರೆ ನನಗೆ ಗೊತ್ತಿಲ್ಲ. 2 ನೇ ಎದುರುದಾರರು ತಮ್ಮ ತಂದೆಗೆ ಬಂದ ಆಸ್ತಿಗೆ ಸಂಬಂಧಪಟ್ಟಂತೆ ಮಾರಯ್ಯರವರ ಮಕ್ಕಳ ಮೇಲೆ ವಿಭಾಗಕ್ಕಾಗಿ ಒಂದು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸಿನ ಓ ಎಸ್ ನಂ. 157/2014 ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆ ರಾಜಿ ಅರ್ಜಿಯಂತೆ ತೀರ್ಮಾನ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ರಾಜಿ ಅರ್ಜಿಯ ಅನುಸಾರವಾಗಿ ಮಾರಯ್ಯನ ಮಕ್ಕಳು ತಮ್ಮ ತಮ್ಮ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಖಾತೆ ವರ್ಗಾವಣೆ ಮಾಡಿಕೊಂಡು ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಎದುರುದಾರರ ಕುಟುಂಬದ ಸದಸ್ಯರು ಭಾಗಾಂಶಕ್ಕಾಗಿ ಸಲ್ಲಿಸಿರುವ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರಗಳು ತಮಗೆ ಗೊತ್ತಿದ್ದರೂ ಸಹ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಓ ಎಸ್ ನಂ. 157/2014 ನಮೂದು ಮಾಡಿದ್ದೀರ ಸಾಕ್ಷಿ ಇಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಕೇಸಿನ ಬಗ್ಗೆ ತಮ್ಮ ತಕರಾರು ಇಲ್ಲ ಎಂದರೆ ಸರಿ. ಸದರಿ ದಾವೆಯನ್ನು ನಾನು ಎಲ್ಲಿಯೂ ಪ್ರಶ್ನೆ ಮಾಡಿಲ್ಲ. ರಾಜಿ ಅರ್ಜಿಯ ಪ್ರಕಾರ ಸರ್ವೆ

**ಎಲ್ ಎ ಸಿ ನಂಃ 42/2015**

**ಆರ್ ಡಬ್ಲ್ಯೂ ಃ 1**

ನಂ. 68/2 ರಲ್ಲಿ 20 ಗುಂಟೆ ಜಮೀನು 2 ನೇ ಎದುರುದಾರರ ಹಿಸ್ಸೆಗೆ ಬಂದಿದೆ ಎಂದರೆ ಸರಿಯಲ್ಲ. ಸದರಿ ರಾಜಿ ಅರ್ಜಿ ಪ್ರಕಾರ 20 ಗುಂಟೆ ವಿಸ್ತೀರ್ಣ ಕ್ಕೆ ಸಂಬಂಧಪಟ್ಟಂತೆ ಖಾತೆ ವರ್ಗಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 2 ನೇ ಎದುರುದಾರರ ಕುಟುಂಬದ ಸದಸ್ಯರೇ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ರಸ್ತೆ ಅಗಲೀಕರಣದಿಂದ ಬರುವ ಪರಿಹಾರದ ಹಣವನ್ನು 2 ನೇ ಅರ್ಜಿದಾರಿಗೆ ಕೊಡಬಾರದು ಎಂಬ ಉದ್ದೇಶದಿಂದ ತಾವು ಈ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ತಾವು ಈ ಅರ್ಜಿಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲಾತಿಗಳು ಸುಳ್ಳು ಎಂದರೆ ಸರಿಯಲ್ಲ. ಸರ್ವೆ ನಂ. 68/2 ರ 20 ಗುಂಟೆ ಜಮಿನೀಗೆ ಸಂಬಂಧಪಟ್ಟಂತೆ ತಮಗೆ ಯಾವುದೆ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ತಾವು ಸಲ್ಲಿಸಿರುವ ಅರ್ಜಿಯಲ್ಲಿ ತಮ್ಮ ಕುಟುಂಬದ ಎಲ್ಲಾ ಸದಸ್ಯರು ಸಾಕ್ಷ್ಯ ನುಡಿದಿದ್ದೀರ ಎಂದರೆ ಸರಿಯಲ್ಲ. ಸರ್ವೆ ನಂ. 68/2 ರ ರಸ್ತೆ ಅಗಲೀಕರಣಕ್ಕೆ ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಪರಿಹಾರ ಮೊತ್ತ 2 ನೇ ಪ್ರತಿವಾದಿಗೆ ಸೇರಬೇಕು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**